**Communication, Coordination and Collaboration**

***-Strengthening the fight against counterfeiting and smuggling-***

31st August 2019, National Law School of India University, Bengaluru

# Deccan Herald

# Judges, cops express grave concern over counterfeiting




Members of the judiciary and the police stand at a seminar on fighting counterfeit goods and smuggling at National Law School of India University in Bengaluru on Saturday (From left: FICCI, Karnataka, chairman Ullas Kamath; FICCI ex-chairman P C Jha; Central Board of Indirect Taxes and Customs former chairman Najib Shah; former chief justice of Jammu and Kashmir High Court Manmohan Sarin; Delhi High Court judge Justice Prathibha Singh; NLSIU Professor T Ramakrishna and Aditya Birla Fashion VP (Legal) Jyothi V K) . DH PHOTO

**AKHIL KADIDAL**
BENGALURU, DHNS

The counterfeiting market in India has grown to such an extent that it is overshadowing efforts by law enforcement to curb it, said judicial and police officials.

Ullas Kamath, Chairman of the Karnataka State Council, Federation of Indian Chambers of Commerce & Industry (FICCI) said that while the national GDP was growing at a rate of 5%, the GDP of counterfeit goods was growing at nearly 10%.

"The total loss to the government because off illicit markets in seven manufacturing sectors, including auto parts, mobile phones, packed goods and cigarettes, amounted to Rs 39,239 crore. The maximum revenue losses came in tobacco products (Rs 9,139 crore), mobile phones (Rs 6,705 crore) and alcoholic beverages (Rs 6,309 crore)," said Kamath, speaking on the sidelines of a seminar on strengthening actions against counterfeiting and smuggling, at the National Law School of India University in Bengaluru on Saturday.

"The aforementioned figures are from 2015, which are the latest available. Today, we estimate the loss to the government at Rs 60,000 crore," he added.

Compounding the problem is that counterfeiting has a nebulous definition, said Justice Prathiba Singh of the Delhi High Court, pointing out the example of a man who legitimately bought a Blu-ray film in the US but then proceeded to rent that film in India, could be accused of piracy, but could not necessarily be prosecuted because his activities fell into a grey area as he had legally purchased the item.

Former Chief Justice of Jammu and Kashmir High Court Manmohan Sarin said, "Our society sees counterfeit goods as a cost-effective alternative to the real thing, but how many people realise that income from fake goods is funding illegal activities?" he asked.

When a panelist suggested policing would be more effective if those below the rank of sub-inspector are given authority to conduct seizures, Sarin disagreed, saying that such a move could increase corruption.

DIG-CID Pravin Pawar said that many junior police officers lack the skills to tackle counterfeit or smuggling. "The police's priority is basic law and order. Even when anti-counterfeiting busts are effective, convictions are low because of slow justice in courts," he added.

## Indian Express

CITY READ

# Seminar on fight against smuggling

FICCI CASCADE (Committee Against Smuggling and Counterfeiting Activities Destroying the Economy) recently organised a seminar – 'Communication, Coordination and Collaboration-Strengthening the fight against counterfeiting and smuggling.

## Eenadu

# అక్రమాలపై ప్రజల్లో చైతన్యం తీసుకురావాలి

**ఎలక్ట్రానిక్‌సిటీ, న్యూస్‌టుడే:** అక్రమాలపై ప్రజల్లో చైతన్యం తీసుకురావాలని న్యాయమూర్తి ప్రతిభా. ఎం. సింగ్ అభిప్రాయపడ్డారు. శనివారం ఆమె ఇక్కడ ఫిక్కి ఏర్పాటు చేసిన 'కమిటీ ఎగనెస్ట్ స్మగ్లింగ్ అండ్ కౌంటర్ ఫీటింగ్ యాక్టివిటీస్ డెస్ట్రాయింగ్ ది ఎకానమీ (క్యాస్కేడ్) సదస్సులో పాల్గొన్నారు. దొంగనోట్ల ముద్రణ, అక్రమ రవాణా తదితర చర్యలు ఆర్థిక వ్యవస్థపై తీవ్ర ప్రభావం చూపుతాయన్నారు. దీన్ని అరికట్టేందుకు ప్రజల్లో తగిన చైతన్యం తీసుకురావాలన్నారు. యువత ఇలాంటి కార్యకలాపాలపై ఎక్కువగా ఆకర్షితులవుతున్నందున వారిలో జాగృతి కలిగించాలన్నారు. సదస్సులో ఫిక్కి రాష్ట్రశాఖ అధ్యక్షుడు ఉల్లాస్ కామత్ తదితరులు పాల్గొన్నారు.




కార్యక్రమాన్ని ప్రారంభిస్తున్న న్యాయమూర్తి ప్రతిభా.ఎం.సింగ్

# Hosa Digantha

ಹೊಸ ದಿಗಂತ
4
02 Sep 2019

## ದೆಹಲಿ ಹೈಕೋರ್ಟ್ ನ್ಯಾ. ಪ್ರತಿಭಾ.ಎಂ.ಸಿಂಗ್

# ಖೋಟಾ ನೋಟು ಕುರಿತು ಯುವಕರಿಗೆ ಜಾಗೃತಿ ಅಗತ್ಯ



**ಬೆಂಗಳೂರು:** ಖೋಟಾ ನೊಟು ಹಾಗೂ ಕಳ್ಳ ಸಾಗಣಿಕೆ ಕುರಿತು ಯುವ ಜನತೆಯಲ್ಲಿ ಜಾಗೃತಿ ಮೂಡಿಸುವುದು ತೀರಾ ಆಗತ್ಯವಾಗಿದೆ ಎಂದು ದೆಹಲಿ ಹೈಕೋರ್ಟ್ ನ್ಯಾ. ಪ್ರತಿಭಾ.ಎಂ.ಸಿಂಗ್ ತಿಳಿಸಿದರು.

ನಗರದ ರಾಷ್ಟ್ರೀಯ ಕಾನೂನು ವಿದ್ಯಾಲಯದಲ್ಲಿ ಎಫ್ಐಸಿಸಿ ಆಯೋಜಿಸಿದ್ದ ಕಳ್ಳಸಾಗಾಣಿಕೆ ಮತ್ತು ಖೋಟಾ ನೋಟು ವಿರೋಧಿ ಹೋರಾಟ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು ದೇಶದ ಆರ್ಥಿಕತೆ ಅಭಿವೃದ್ಧಿಗಾಗಿ ಖೋಟಾ ನೋಟು ಹಾಗೂ ಕಳ್ಳ ಸಾಗಾಣಿಕೆ ವಿರುದ್ಧ ಕಠಿಣ ಕ್ರಮ ಹಾಗೂ ಅದರ ಅನುಷ್ಠಾನ ತೀರಾ ಅಗತ್ಯ ಎಂದರು.

ಕಳ್ಳತನ ಹಾಗೂ ಸ್ಮಗ್ಲಿಂಗ್‌ನ ಪರಿಣಾಮದ ಕುರಿತು ಯುವ ಜನತೆಗೆ ಜಾಗೃತಿ ಹಾಗೂ ಶಿಕ್ಷಣ ನೀಡಬೇಕಾಗಿದೆ. ಇದರ ವಿರುದ್ಧ ಕಠಿಣ ಕ್ರಮ ಕೈಗೊಂಡಲ್ಲಿ ಹೆಚ್ಚುತ್ತಿರುವ ರಾಷ್ಟ್ರೀಯ-ಅಂತಾರಾಷ್ಟ್ರೀಯ ಬೃಹತ್ ದಂಧೆಯನ್ನು ತಡೆಗಟ್ಟಲು ಸಾಧ್ಯ ಎಂದರು.

**ಕಳ್ಳ ಸಾಗಣೆಯಿಂದ ಸರ್ಕಾರಕ್ಕೆ 39 ಸಾವಿರ ಕೋಟಿ ನಷ್ಟ:** ಬಳಿಕ ಮಾತನಾಡಿದ ಎಫ್ಐಸಿಸಿಐ ಅಧ್ಯಕ್ಷ ಉಲ್ಲಾಸ್ ಕಾಮತ್, 2015ರ ಗಣತಿಯ ಪ್ರಕಾರ ಕಳ್ಳ ಸಾಗಾಣಿಕೆಯಿಂದಾಗಿ ಸರ್ಕಾರದ ಬೊಕ್ಕಸಕ್ಕೆ 39,239 ಕೋಟಿ ನಷ್ಟವಾಗಿದೆ. ಪ್ರಮುಖವಾಗಿ ತಂಬಾಕು ಮಾರುಕಟ್ಟೆಗೆ ಇದರಿಂದ ಸುಮಾರು 9ಕೋಟಿಗೂ ಹೆಚ್ಚು ನಷ್ಟ ಉಂಟಾಗಿದೆ. ಕಳ್ಳ ಸಾಗಾಣಿಕೆ ಭೂಗತ ಲೋಕದ ಪ್ರಮುಖ ಆದಾಯವಾಗಿದೆ ಎಂದರು.

**ಎಫ್‌ಸಿಸಿಐಗೆ ವಿವಿ ಸಾಥ್:** ಬಳಿಕ ಮಾತನಾಡಿದ ರಾಷ್ಟ್ರೀಯ ಕಾನೂನು ವಿದ್ಯಾಲಯದ ಕುಲಪತಿ ಡಾ.ಎಂ.ಕೆ.ರಮೇಶ್, ಕಳ್ಳಸಾಗಾಣಿಕೆ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಂಡಲ್ಲಿ ವಿಶ್ವದಾದ್ಯಂತ ಭಾರತ ಪ್ರಕಾಶಿಸಲಿದೆ. ಎಫ್‌ಸಿಸಿಐ ಕಾರ್ಯದ ಜೊತೆ ರಾಷ್ಟ್ರೀಯ ಕಾನೂನು ವಿದ್ಯಾಲಯವೂ ಕೈಜೋಡಿಸಲಿದೆ ಎಂದರು.

ಸಮಾರಂಭದಲ್ಲಿ ಸಿಐಡಿ ಡಿಜಿಪಿ ಪ್ರವೀಣ ಪವಾರ್, ಡಾ.ಅನೀಶ್ ಕುಮಾರ್, ಪ್ರೊ.ರಾಮಕೃಷ್ಣ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

# Kannada Prabha

ನಲ್ಲಿ 'ಚುನಾವಣೆಗಳಲ್ಲಿ ಸಾಮಾಜಿಕ
ಗಳು ಮತ್ತು ಮಾಹಿತಿ ತಂತ್ರಜ್ಞಾನದ

ಕೇಂದ್ರ ಚುನಾವಣಾ ಆಯೋಗದ ಉಪ ಚುನಾವಣಾ ಆಯುಕ್ತ ಉಮೇಶ್ ಸಿನ್ಹಾ ಹಾಗೂ ಕರ್ನಾಟಕ ರಾಜ್ಯ ಮುಖ್ಯ ಚುನಾವಣಾಧಿಕಾರಿ ಸಂಜೀವ್ ಕುಮಾರ್ ಹಸ್ತಲಾಘವ ಮಾಡಿದರು.

ಸಭೆಯಲ್ಲಿ ಚುನಾವಣಾ
ನಡುವೆ ಸಹಭಾಗಿತ್ವ ಹೆಚ್ಚಳ

# ...ಳ್ಳ ಸಾಗಣೆ ನಿಯಂತ್ರಣಕ್ಕೆ ಸ್ಪಷ್ಟ ಕಾನೂನು ಅಗತ್ಯ'

## ...ಪದದ ವ್ಯಾಖ್ಯಾನದಲ್ಲಿ ಮತ್ತಷ್ಟು ಸ್ಪಷ್ಟತೆ ಅಗತ್ಯ: ನ್ಯಾಯಮೂರ್ತಿ ಪ್ರತಿಭಾ ಸಿಂಗ್ ಪ್ರತಿಪಾದನೆ

**...ಭ ವಾರ್ತೆ** ಬೆಂಗಳೂರು

...ಮತ್ತು ನಕಲಿ ತಯಾರಿಕಾ ಜಾಲದ ಪತ್ತೆ ಹಾಗೂ ...ಕ್ಕೆ ದೇಶದಲ್ಲಿ ಮತ್ತಷ್ಟು ಸ್ಪಷ್ಟ ಹಾಗೂ ...ಕಾರಿ ಕಾನೂನು ಜಾರಿಯ ಅಗತ್ಯವಿದೆ ಎಂದು ...ೋರ್ಟ್ ನ್ಯಾಯಮೂರ್ತಿ ಪ್ರತಿಭಾ ಸಿಂಗ್ ...ದ್ದಾರೆ.

...ಕ ವಾಣಿಜ್ಯೋದ್ಯಮ ಮಹಾಸಂಘಗಳ (ಎಫ್‌ಕೆಸಿಸಿಐ) ಆರ್ಥಿಕತೆ ನಾಶಪಡಿಸುವ ಮತ್ತು ನಕಲಿ ತಯಾರಿಕಾ ಚಟುವಟಿಕೆ ... ಸಮಿತಿಯು (ಸಿಎಎಸ್‌ಸಿಎಡಿಇ) ನಗರದ ...ಯ ನ್ಯಾಷನಲ್ ಲಾ ಸ್ಕೂಲ್‌ನಲ್ಲಿ ...ದ್ದ 'ನಕಲಿ ಮತ್ತು ಕಳ್ಳಸಾಗಣೆ ವಿರುದ್ಧದ ಬಲಪಡಿಸಲು- ಸಂವಹನ, ಸಮನ್ವಯ ...ಯೋಗ' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ...ತನಾಡಿದರು.

ಹಕ್ಕು ಸ್ವಾಮ್ಯ ವಿಚಾರವಾಗಿ ನಮ್ಮಲ್ಲಿ ...ು ಹೆಚ್ಚಾಗುತ್ತಿವೆ. ಹಾಗಾಗಿ ನಮ್ಮಲ್ಲಿ 'ನಕಲಿ' ...ಖ್ಯಾನದಲ್ಲಿ ಇನ್ನಷ್ಟು ಸ್ಪಷ್ಟತೆ ಅಗತ್ಯವಿದೆ. ...ತಿಯ ಹೆಸರು, ಲೇಬಲ್, ಲೋಗೋಗಳು ...ು ಪರಿಗಣಿಸಬಲ್ಲಡುತ್ತವೆ. ಆದರೆ, ಅವುಗಳಲ್ಲಿ ...ದಲಾವಣೆ ಮಾಡಿಕೊಂಡಾಗ ಅದು ನಕಲಿ ... ಆದರೆ, ಡಿಜಿಟಲ್ ಯುಗದಲ್ಲಿ 'ನಕಲಿ' ವ್ಯಾಖ್ಯಾನ ಬದಲಾಗುತ್ತದೆ. ಒಬ್ಬ ವ್ಯಕ್ತಿ ...ನ ತಂದ ಅಸಲಿ ಡಿವಿಡಿಯನ್ನು ಅಥವಾ ಆನ್ ...ಖರೀದಿಸಿದ ಅಥವಾ ವಿದೇಶದಿಂದ ತಂದ ತಮ್ಮ ಸಂಬಂಧಿಕರಿಗೋ, ಸ್ನೇಹಿತರಿಗೋ ...ಮಾಡುವುದು ನಕಲಿ ಆಗುತ್ತಾ? ಎಂದು ...ವುದು ಕಷ್ಟ. ಇಂತಹ ಪ್ರಕರಣವೊಂದು ...ಯದಲ್ಲಿ ಬಂದಾಗ ಅದು ಶೈಕ್ಷಣಿಕ ...ದ ಆಗಿರುವುದು ಎಂದು ಪರಿಗಣಿಸಲ್ಪಟ್ಟಿತು.



ನಗರದಲ್ಲಿ ಕರ್ನಾಟಕ ವಾಣಿಜ್ಯೋದ್ಯಮ ಮಹಾಸಂಘಗಳ ಒಕ್ಕೂಟ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಪ್ರತಿಭಾ ಸಿಂಗ್ ಇತರರಿದ್ದರು.

ಹಾಗಾಗಿ ಕಳ್ಳಸಾಗಣೆ ಮತ್ತು ನಕಲಿ ತಯಾರಿಕಾ ಜಾಲದ ಪತ್ತೆ ಹಾಗೂ ನಿಯಂತ್ರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಚರ್ಚೆಯಾಗಬೇಕು. ನಂತರ ಮತ್ತಷ್ಟು ಸ್ಪಷ್ಟ ಮತ್ತು ಪರಿಣಾಮಕಾರಿ ಕಾನೂನು ಜಾರಿಯಾಗಬೇಕು ಎಂದರು.

ಎಫ್‌ಐಸಿಸಿಐ ಕರ್ನಾಟಕ ರಾಜ್ಯ ಮಂಡಳಿ ಅಧ್ಯಕ್ಷ ಉಲ್ಲಾಸ್ ಕಾಮತ್ ಮಾತನಾಡಿ, ಕಳ್ಳಸಾಗಣೆ ಮತ್ತು ನಕಲಿ ತಯಾರಿಕಾ ಜಾಲದಿಂದ ದೇಶದ ಕೈಗಾರಿಕೆಗಳು, ಗ್ರಾಹಕರು, ಸರ್ಕಾರ ಮತ್ತು ದೇಶದ ಆರ್ಥಿಕತೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

2015ರ ಎಫ್‌ಐಸಿಸಿಐ ವರದಿ ಪ್ರಕಾರ, ಈ ಕಾರಣದಿಂದ ಕೇವಲ ಏಳು ಉತ್ಪಾದನಾ ಕ್ಷೇತ್ರದಲ್ಲಿ ಸರ್ಕಾರಕ್ಕೆ 39,239 ಕೋಟಿ ನಷ್ಟವಾಗಿದೆ. ಇತ್ತೀಚಿನ ವರದಿ ಪ್ರಕಾರ, ಅಕ್ರಮ ವ್ಯಾಪಾರ ಕ್ಷೇತ್ರದಲ್ಲಿ ಇಂಧನ ಭಯೋತ್ಪಾದನೆಯ ಆರ್ಥಿಕತೆ ಮತ್ತು ಸಂಘಟಿತ ಅಪರಾಧ ಚಟುವಟಿಕೆಗಳು ಭಯೋತ್ಪಾದನೆ ಯಂತಹ ಅಪರಾಧ ಚಟುವಟಿಕೆಗಳಿಗೆ ಜಾಗತಿಕ ಮಟ್ಟದಲ್ಲಿ ಅತಿದೊಡ್ಡ ಆದಾಯ ಮೂಲಗಳಾಗಿವೆ. ಅಲ್ಲದೆ, ಜಾಗತಿಕವಾಗಿ 2013ರಲ್ಲಿ 20 ಲಕ್ಷದಿಂದ 26 ಲಕ್ಷ ಉದ್ಯೋಗ ನಷ್ಟವಾದರೆ, 2022ರ ವೇಳೆಗೆ ಇದು 42 ಲಕ್ಷದಿಂದ 54 ಲಕ್ಷಕ್ಕೇರುವ ಆತಂಕ ಇದೆ ಎಂದರು. ರಾಷ್ಟ್ರೀಯ ಕಾನೂನು ಶಾಲೆ ಇಂಡಿಯಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಾ.ಎಂ.ಕೆ.ರಮೇಶ್, ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಮನಮೋಹನ್ ಸರಿನ್, ಎಫ್‌ಐಸಿಸಿಐ ಸಲಹೆಗಾರ ಪಿ.ಸಿ.ಜಾ, ಕಾನೂನು ಪ್ರಾಧ್ಯಾಪಕ ಪ್ರೊ.ಟಿ.ರಾಮಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

# ಶಿವ...

## ನರೇ...

**ಕನಕಪುರ:** ಸರ್ಕಾರ ... ಮಾರ್ ... ಎಂದು ... ರ್ತರು ... ಕನಕಪುರ ... ದಲ್ಲಿ ಪ್ರತಿ...

ರಾಷ್ಟ್ರೀ... ಯನ್ನು ತ... ರ್ತರು, ... ಹಾಗೂ ಗ... ಘೋಷಣೆ... ದರು. ಈ ... ಕಾರ್ಯಕ... ಕರವೇ ... ನೀಡಿದರು...

ಈ ವೆ...


ಕನಕಪುರದ...

# Samyukta Karnataka

ಹೇಳಿದರು.

ಗಾಂಧೀಜಿ ಮತ್ತು ದೇವರಾಜು ಅರಸು ಅವರ ಚಿಂತನೆಗಳ ನಡುವೆ ಸಾಮ್ಯತೆಗಳಿವೆ. ಅವರೂ ಸಹ ಗಾಂಧಿವಾದಿಗಳಾಗಿದ್ದರು.

ತೊಡಗಿಕೊಂಡರು. ತಮ್ಮ ಊರಿನ ಜನರಿಗೆ ಶಿಸ್ತನ್ನು ಕಲಿಸಿದರು. ಜೊತೆಗೆ ನಾಟಕಗಳಲ್ಲೂ ಭಾಗವಹಿಸಿದ್ದರು. ಇವೆಲ್ಲಾ ಅವರನ್ನು ಪ್ರಬುದ್ಧರನ್ನಾಗಿಸಿ,

ಸಾಹಿತಿ ರಾಂ.ಕೆ.ಹನುಮಂತಯ್ಯ, ಕವಿ ಆರ್.ಸದಾಶಿವಯ್ಯ ಜರಗನಹಳ್ಳಿ, ಪ್ರೊ.ಪಿ.ಸದಾಶಿವ, ಹಿರಿಯ ಸಂಘಟಕ ಎಂ.ತಿಮ್ಮಯ್ಯ ಸೇರಿದಂತೆ ಹಲವರಿದ್ದರು.

## ಕಳ್ಳಸಾಗಣೆ ಹತ್ತಿಕ್ಕಲು ಬಿಗಿ ಕಾನೂನು ಅಗತ್ಯ

**ಸಂ.ಕ.ಸಮಾಚಾರ ಬೆಂಗಳೂರು**

ಅಕ್ರಮ ವ್ಯವಹಾರಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಗ್ರಾಹಕರಲ್ಲಿ ಅದರಲ್ಲೂ ವಿಶೇಷವಾಗಿ ಯುವಜನರಿಗೆ ಶಿಕ್ಷಣ ನೀಡುವುದು, ಜಾಗೃತಿ ಮೂಡಿಸುವುದು ಸೇರಿದಂತೆ ಇನ್ನಿತರೆ ಅಭಿಯಾನಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ ಎಂದು ದೆಹಲಿಯ ಹೈಕೋರ್ಟ್ ನ್ಯಾಯಾಧೀಶೆ ಪ್ರತಿಭಾ ಎಂ. ಸಿಂಗ್ ಪ್ರತಿಪಾದಿಸಿದರು.

ಎಫ್ ಐಸಿಸಿಐ ಕ್ಯಾಸ್ಕೇಡ್ ವತಿಯಿಂದ ಆಯೋಜಿಸಿದ್ದ ನಕಲಿ ಮತ್ತು ಕಳ್ಳಸಾಗಣೆ ವಿರುದ್ಧ ಸಂಪರ್ಕ, ಸಂವಹನ ಮತ್ತು ಸಮನ್ವಯ–ಬಲವರ್ಧನೆ ಕುರಿತಾದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, 2015ರ




ಎಫ್ ಐಸಿಸಿಐ ಕ್ಯಾಸ್ಕೇಡ್ ವತಿಯಿಂದ ಆಯೋಜಿಸಿದ್ದ ನಕಲಿ ಮತ್ತು ಕಳ್ಳಸಾಗಣೆ ವಿರುದ್ಧ ಸಂಪರ್ಕ, ಸಂವಹನ ಮತ್ತು ಸಮನ್ವಯ–ಬಲವರ್ಧನೆ ಕುರಿತಾದ ವಿಚಾರ ಸಂಕಿರಣಕ್ಕೆ ದೆಹಲಿಯ ಹೈಕೋರ್ಟ್ ನ್ಯಾಯಾಧೀಶರಾದ ಪ್ರತಿಭಾ ಎಂ. ಸಿಂಗ್ ಚಾಲನೆ ನೀಡಿದರು.

# Sanjevani

ಸಂಪರ್ಕಿಸಿ: 94498 71825 ಭಾನುವಾರ 1 ಸೆಪ್ಟೆಂಬರ್ 2019 **5**

## ಯುವ ಜನತೆಗೆ ಶಿಕ್ಷಣ ನೀಡಲು ಮನವಿ

ಬೆಂಗಳೂರು,ಸೆ.1–ಅಕ್ರಮ ವ್ಯವಹಾರಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಗ್ರಾಹಕರಲ್ಲಿ ಅದರಲ್ಲೂ ವಿಶೇಷವಾಗಿ ಯುವಜನರಿಗೆ ಶಿಕ್ಷಣ ನೀಡುವುದು, ಜಾಗೃತಿ ಮೂಡಿಸುವುದು ಸೇರಿದಂತೆ ಇನ್ನಿತರೆ ಅಭಿಯಾನಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ ಎಂದು ದೆಹಲಿ ಹೈಕೋರ್ಟಿನ ನ್ಯಾಯಾಧೀಶರಾದ ಪ್ರತಿಭಾ ಎಂ. ಸಿಂಗ್ ಹೇಳಿದ್ದಾರೆ.

ಎಫ್ ಐಸಿಸಿಐ ಕ್ಯಾಸ್ಕೇಡ್ ಆಯೋಜಿಸಿದ್ದ 'ನಕಲಿ ಮತ್ತು ಕಳ್ಳಸಾಗಣೆ ವಿರುದ್ಧ ಸಂಪರ್ಕ, ಸಂವಹನ ಮತ್ತು ಸಮನ್ವಯ–ಬಲವರ್ಧನೆ' ಕುರಿತಾದ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಮಾತನಾಡಿದ ಅವರು,ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಬಲಗೊಳಿಸಬೇಕಾದ ತುರ್ತು ಅಗತ್ಯತೆ ಇದೆ ಎಂದು ಹೇಳಿದ್ದಾರೆ.

ಎಫ್ ಐಸಿಸಿಐನ ಕರ್ನಾಟಕ ರಾಜ್ಯ ಮಂಡಳಿ ಅಧ್ಯಕ್ಷ ಉಲ್ಲಾಸ್




ಕಾಮತ್,ನಕಲಿ ಉತ್ಪನ್ನಗಳ ಹಾವಳಿ ಮತ್ತು ಕಳ್ಳಸಾಗಣೆಯಂತಹ ಅಕ್ರಮ ವ್ಯವಹಾರಗಳು ಕೈಗಾರಿಕೆಗಳು, ಗ್ರಾಹಕರು, ಸರ್ಕಾರ ಮತ್ತು ಆರ್ಥಿಕ ವ್ಯವಸ್ಥೆ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು.

2015ರ ಎಫ್ ಐಸಿಸಿಐ ಕ್ಯಾಸ್ಕೇಡ್ ವರದಿ ಪ್ರಕಾರ ದೇಶದಲ್ಲಿ ಕೇವಲ ಏಳು ಉತ್ಪಾದನಾ ವಲಯಗಳ ಕಳ್ಳ ಮಾರುಕಟ್ಟೆಯ ಚಟುವಟಿಕೆಗಳಿಂದಾಗಿ ವಾರ್ಷಿಕ 39,239 ಕೋಟಿ ರೂಪಾಯಿ ನಷ್ಟ ಅನುಭವಿಸುತ್ತಿದೆ ಎಂದು ಅಂದಾಜು ಮಾಡಿದೆ.

ನ್ಯಾಷನಲ್ ಲಾ ಸ್ಕೂಲ್‌ನ ಉಪಕುಲಪತಿ ಪ್ರೊ.ಡಾ.ಎಂ.ಕೆ.ರಮೇಶ್ ನ್ಯಾಯಮೂರ್ತಿ ಮನಮೋಹನ್ ಸರಿನ್, ಜಮ್ಮು ಮತ್ತು ಕಾಶ್ಮೀರ ಹಾಗೂ ದೆಹಲಿ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಾಧೀಶ ಪಿ.ಸಿ.ಝಾ, ಕಾನೂನು ತಜ್ಞ ಪ್ರೊ.ಟಿ.ರಾಮಕೃಷ್ಣ ಮೊದಲಾದವರು ಉಪಸ್ಥಿತರಿದ್ದರು.

# Vartha Bharati

ವಾರ್ತಾ ಭಾರತಿ

# 2022ರ ವೇಳೆಗೆ 5.4 ದಶಲಕ್ಷ ಉದ್ಯೋಗ ನಷ್ಟ: ಉಲ್ಲಾಸ್ ಕಾಮತ್

## 'ನಕಲಿ, ಕಳ್ಳಸಾಗಣೆ ವಿರುದ್ಧ ಸಂಪರ್ಕ, ಸಂವಹನ ಮತ್ತು ಸಮನ್ವಯ- ಬಲವರ್ಧನೆ' ವಿಚಾರ ಸಂಕಿರಣ

ಬೆಂಗಳೂರು, ಆ.31: ನಕಲಿ ಮತ್ತು ಪೈರಸಿಯಿಂದಾಗಿ ಜಾಗತಿಕ ಮಟ್ಟದಲ್ಲಿ 2013ರಲ್ಲಿ 2 ರಿಂದ 2.6 ದಶಲಕ್ಷ ಉದ್ಯೋಗಗಳು ನಷ್ಟವಾಗಿವೆ ಮತ್ತು 2022ರ ವೇಳೆಗೆ 4.2ರಿಂದ 5.4 ದಶಲಕ್ಷ ಉದ್ಯೋಗ ನಷ್ಟವಾಗುವ ನಿರೀಕ್ಷೆ ಇದೆ ಎಂದು ಎಫ್‌ಐಸಿಸಿಐ ರಾಜ್ಯ ಮಂಡಳಿ ಅಧ್ಯಕ್ಷ ಉಲ್ಲಾಸ್ ಕಾಮತ್ ಆತಂಕ ವ್ಯಕ್ತಪಡಿಸಿದ್ದಾರೆ.




ಶನಿವಾರ ನಗರದ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದಲ್ಲಿ ಎಫ್‌ಐಸಿಸಿಐ ಕ್ಯಾಸ್ಕೇಡ್(ಕಮಿಟಿ ಎಗೆನೆಸ್ಟ್ ಸ್ಮಗ್ಲಿಂಗ್ ಆ್ಯಂಡ್ ಕೌಂಟರ್ ಫಿಟಿಂಗ್ ಆಕ್ಟಿವಿಟೀಸ್ ಡೆಸ್ಟ್ರಾಯಿಂಗ್ ದಿ ಎಕಾನಮಿ) ವತಿಯಿಂದ ಆಯೋಜಿಸಿದ್ದ 'ನಕಲಿ ಮತ್ತು ಕಳ್ಳಸಾಗಣೆ ವಿರುದ್ಧ ಸಂಪರ್ಕ, ಸಂವಹನ ಮತ್ತು ಸಮನ್ವಯ- ಬಲವರ್ಧನೆ' ಕುರಿತಾದ ವಿಚಾರ ಸಂಕಿರಣವನ್ನುದ್ದೇಶಿಸಿ ಅವರು ಮಾತನಾಡಿದರು.

ಉದ್ಯೋಗ ನಷ್ಟದ ಪ್ರಮಾಣದಲ್ಲಿ ಶೇ.110ರಷ್ಟು ಹೆಚ್ಚಳವಾಗಲಿದೆ. ನಕಲಿ ಉತ್ಪನ್ನಗಳ ಹಾವಳಿ ಮತ್ತು ಕಳ್ಳಸಾಗಣೆಯಂತಹ ಅಕ್ರಮ ವ್ಯವಹಾರಗಳು ಕೈಗಾರಿಕೆಗಳು, ಗ್ರಾಹಕರು, ಸರಕಾರ ಮತ್ತು ಆರ್ಥಿಕ ವ್ಯವಸ್ಥೆ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತಿವೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಆರ್ಥಿಕತೆಯ ವಿವಿಧ ಕ್ಷೇತ್ರಗಳಲ್ಲಿ ಸ್ಪರ್ಧಾತ್ಮಕತೆಯನ್ನು ಅಭಿವೃದ್ಧಿಪಡಿಸುವಲ್ಲಿ ಕಾನೂನು ಬದ್ಧ ಉದ್ಯಮದ ಹಕ್ಕುಗಳನ್ನು ಕಾಪಾಡುವ ಅಗತ್ಯವನ್ನು ಅರ್ಥಮಾಡಿಕೊಳ್ಳುವುದು ಕಡ್ಡಾಯವಾಗಿದೆ ಎಂದು ಉಲ್ಲಾಸ್ ಕಾಮತ್ ಅಭಿಪ್ರಾಯಪಟ್ಟರು. ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಎಂ.ಕೆ.ರಮೇಶ್, ನ್ಯಾ. ಮನಮೋಹನ್ ಸರಿನ್, ಜಮ್ಮು ಮತ್ತು ಕಾಶ್ಮೀರ ಹಾಗೂ ದಿಲ್ಲಿ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಾಧೀಶ ಪಿ.ಸಿ.ಝಾ, ಕಾನೂನು ತಜ್ಞ ಡಾ. ಟಿ.ರಾಮಕೃಷ್ಣ ಮೊದಲಾದವರು ಈ ಅಕ್ರಮ ವ್ಯವಹಾರಗಳನ್ನು ತೊಡೆದುಹಾಕುವ ಅಗತ್ಯತೆಗಳ ಬಗ್ಗೆ ಬೆಳಕು ಚೆಲ್ಲಿದರು.

2015ರ ಎಫ್‌ಐಸಿಸಿಐ ಕ್ಯಾಸ್ಕೇಡ್ ವರದಿ ಪ್ರಕಾರ ಭಾರತ ಸರಕಾರ ಕೇವಲ ಏಳು ಉತ್ಪಾದನಾ ವಲಯಗಳ ಕಳ್ಳ ಮಾರುಕಟ್ಟೆಯ ಚಟುವಟಿಕೆಗಳಿಂದಾಗಿ ವಾರ್ಷಿಕ 39,239 ಕೋಟಿ ರೂ. ನಷ್ಟ ಅನುಭವಿಸುತ್ತಿದೆ ಎಂದು ಅಂದಾಜು ಮಾಡಿದೆ. ಇವುಗಳಲ್ಲಿ ಪ್ರಮುಖವಾಗಿ ತಂಬಾಕು ಉತ್ಪನ್ನಗಳ ನಕಲಿ ಮತ್ತು ಕಳ್ಳಸಾಗಣೆ ಹಾವಳಿಯಿಂದ ಸರಕಾರದ ಬೊಕ್ಕಸಕ್ಕೆ 9,139 ಕೋಟಿ ರೂ. ನಷ್ಟ ಉಂಟಾಗುತ್ತಿದೆ. ಅದೇ ರೀತಿ ಮೊಬೈಲ್ ಫೋನ್‌ಗಳಿಂದ 6,705 ಕೋಟಿ ರೂ. ಮತ್ತು ಮದ್ಯದಿಂದ 6,309 ಕೋಟಿ ರೂ. ನಷ್ಟ ಉಂಟಾಗುತ್ತಿದೆ.

। ಉಲ್ಲಾಸ್ ಕಾಮತ್, ಎಫ್‌ಐಸಿಸಿಐ ರಾಜ್ಯ ಮಂಡಳಿ ಅಧ್ಯಕ್ಷ

ಈ ಅಕ್ರಮ ವ್ಯವಹಾರಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಗ್ರಾಹಕರಲ್ಲಿ ಅದರಲ್ಲೂ ವಿಶೇಷವಾಗಿ ಯುವಜನರಿಗೆ ಶಿಕ್ಷಣ ನೀಡುವುದು, ಜಾಗೃತಿ ಮೂಡಿಸುವುದು ಸೇರಿದಂತೆ ಇನ್ನಿತರೆ ಅಭಿಯಾನಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ. ಈಗಾಗಲೇ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಬಲಗೊಳಿಸಬೇಕಾದ ತುರ್ತು ಅಗತ್ಯತೆ ಇದೆ ಮತ್ತು ಈ ನಿಟ್ಟಿನಲ್ಲಿ ಅಂತರ್‌ ರಾಷ್ಟ್ರೀಯ ಮಟ್ಟದ ಸಹಕಾರವನ್ನೂ ಪಡೆದುಕೊಳ್ಳಬೇಕಾಗಿದೆ.

। ಪ್ರತಿಭಾ ಎಂ.ಸಿಂಗ್,
ದಿಲ್ಲಿ ಹೈಕೋರ್ಟ್‌ನ ನ್ಯಾಯಾಧೀಶೆ

Page No. 12 Sep 01, 2019
Powered by: erelego.com

# Vijay Karnataka

# ಡಿಜಿಟಲ್ ಅಕ್ರಮ ತಡೆಗಟ್ಟುವುದು ಸವಾಲು

■ **ವಿಕ ಸುದ್ದಿಲೋಕ** ಬೆಂಗಳೂರು

ಕಾನೂನು ಮಿತಿ, ತಂತ್ರಜ್ಞಾನದ ದುರ್ಬಳಕೆ ಮೊದಲಾದ ಕಾರಣಗಳಿಂದ ಡಿಜಿಟಲ್ ಲೋಕದ ಅಕ್ರಮಗಳನ್ನು ತಡೆಗಟ್ಟುವುದು ಸವಾಲಾಗಿದೆ ಎಂದು ಹೊಸದಿಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಪ್ರತಿಭಾ ಸಿಂಗ್ ಹೇಳಿದರು.

## ನ್ಯಾ . ಪ್ರತಿಭಾ ಸಿಂಗ್ ಅಭಿಮತ




ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 'ವಿಚಾರ ಸಂಕಿರಣವನ್ನು ಹೊಸದಿಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಪ್ರತಿಭಾ ಸಿಂಗ್ ಉದ್ಘಾಟಿಸಿದರು.

ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದಲ್ಲಿ ಎಫ್‌ಐಸಿಸಿಐ(ಫಿಕ್ಕಿ) ಆಯೋಜಿಸಿದ್ದ 'ಕಳ್ಳ ಸಾಗಾಣಿಕೆ ಮತ್ತು ನಕಲಿ ಉತ್ಪನ್ನಗಳ ಮಾರಾಟ ವಿರುದ್ಧದ ಹೋರಾಟ ಬಲವರ್ಧನೆಗೆ ಸಂವಹನ, ಸಮನ್ವಯ ಹಾಗೂ ಸಹಯೋಗ' ವಿಷಯ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

''ಯಾವುದಾದರೂ ವೆಬ್‌ಸೈಟ್ ಕಾನೂನುಬಾಹಿರ ಕೆಲಸ ಮಾಡಿರುವುದು ಸಾಬೀತಾದರೆ ಅದನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗುತ್ತದೆ. ಆದರೆ ಮರುದಿನ ಅದೇ ವೆಬ್‌ಸೈಟ್ ಬೇರೆ ಹೆಸರಲ್ಲಿ ಅಥವಾ ತಿರುಚಿದ ಹೆಸರಲ್ಲಿ ಪುನರಾರಂಭವಾಗುತ್ತದೆ. ನ್ಯಾಯಾಲಯಗಳು ಇಂತಹ ಘಟನೆಗಳಿಂದ ಅಚ್ಚರಿಗೊಳಗಾಗಿವೆ. ಕಾನೂನು ಬಲಪಡಿಸುವ ಮೂಲಕ ಈ ಅಕ್ರಮ ತಡೆಯಬೇಕು,'' ಎಂದರು.

''ಚಿತ್ರಮಂದಿರದಲ್ಲಿ ಮೊಬೈಲ್ ಚಿತ್ರೀಕರಣ ನಿಷೇಧ ಕ್ರಮ ಯಶಸ್ವಿಯಾಗಿ ಜಾರಿಯಾಗಿದೆ. ಹಿಂದೆ ಯುವಜನರು ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡಿ ಹಂಚುತ್ತಿದ್ದರು. ಈಗ ಯಾವುದೇ ಚಿತ್ರಮಂದಿರದಲ್ಲಿ ಇದಕ್ಕೆ ಅವಕಾಶ ನೀಡದಂತೆ ಮಾಡಲಾಗಿದೆ. ಕಟ್ಟುನಿಟ್ಟಿನ ಕ್ರಮ ಹಾಗೂ ಜಾಗೃತಿ ಮೂಡಿಸುವ ಕೆಲಸದಿಂದ ಇದು ಸಾಧ್ಯವಾಗಿದೆ. ಯುವಜನರು ವೆಬ್‌ಸೈಟ್‌ಗಳಿಂದ ಚಲನಚಿತ್ರ ಡೌನ್‌ಲೋಡ್ ಮಾಡಿ ವೀಕ್ಷಿಸುತ್ತಾರೆ. ಹಾಗೆಂದು ಅವರನ್ನು ಜೈಲಿಗಟ್ಟಲು ಸಾಧ್ಯವಿಲ್ಲ. ಅರಿವು ಮೂಡಿಸುವುದೊಂದೇ ಇದಕ್ಕೆ ಪರಿಹಾರ,'' ಎಂದು ಹೇಳಿದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ.ಕೆ.ರಮೇಶ್ ಮಾತನಾಡಿ, ''ಕಳ್ಳಸಾಗಣೆ ಹಾಗೂ ನಕಲಿ ಉತ್ಪನ್ನಗಳ ವಿರುದ್ಧ ಕಠಿಣ ಕ್ರಮ ಕೈಗೊಂಡರೆ ಜಾಗತಿಕ ಮಟ್ಟದಲ್ಲಿ ದೇಶ ಉತ್ತಮ ಹೆಸರು ಗಳಿಸುತ್ತದೆ. ಇದಕ್ಕೆ ಸಂಬಂಧಿಸಿದ ಕಾನೂನುಗಳ ಬಲವರ್ಧನೆಗೆ ವಿಶ್ವವಿದ್ಯಾಲಯ ಸಂಪೂರ್ಣ ಸಹಕಾರ ನೀಡಲಿದೆ,'' ಎಂದರು. ಫಿಕ್ಕಿ ರಾಜ್ಯ ಮಂಡಳಿ ಅಧ್ಯಕ್ಷ ಉಲ್ಲಾಸ್ ಕಾಮತ್, ಥಿಂಕ್ ಟ್ಯಾಂಕ್ ಸದಸ್ಯ ನಜೀಬ್ ಷಾ, ವಿ.ಕೆ.ಜ್ಯೋತಿ ಹಾಜರಿದ್ದರು.

### ಕಾನೂನು ತೊಡಕು

''ಆನ್‌ಲೈನ್‌ನಲ್ಲಿ ಉತ್ಪನ್ನಗಳನ್ನು ಮಾರುತ್ತಿದ್ದ ಸಂಸ್ಥೆಯೊಂದರ ಮೇಲೆ ಹೊಸದಿಲ್ಲಿ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿತ್ತು. ಈ ಸಂಸ್ಥೆ ವಿದೇಶಿಯಾಗಿದ್ದು, ಬೇರೆ ದೇಶಗಳ ವಸ್ತುಗಳನ್ನು ತಂದು ಭಾರತದಲ್ಲಿ ಮಾರುತ್ತಿತ್ತು. ಈ ಪ್ರಕರಣದ ವಿಚಾರಣೆ ನಡೆಸಲು ಕಾನೂನು ತೊಡಕು ಉಂಟಾಗಿತ್ತು,'' ಎಂದು ಹೊಸದಿಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಪ್ರತಿಭಾ ಸಿಂಗ್ ಹೇಳಿದರು.